ನಿಮ್ಮನ್ನು ಬಿಸಿಲಿನಲ್ಲಿ ಕರೆದುಕೊಂಡು ಹೋಗುವ ಬದಲು ಈ ಕಾಡಿನ ರಸ್ತೆಯಲ್ಲಿ ಕರಕೊಂಡು ಬರುವ ಅಂತ ಬಂದೆ. ಹಿಂದೆ ಹೋಗುವಾಗ ಕಾಲು ರಸ್ತೆಯಲ್ಲೇ ಹೋಗುವ' ಅಂದರು.

'ಅಲ್ಲ, ನಮ್ಮ ಅನಂತ ಶಾಸ್ತ್ರಿಗಳಿಗೆ ಅಮೆರಿಕದಲ್ಲಿ ಏನಾಯಿತು?' ಅಂತ ಆನಂದಣ್ಣ ಕೇಳಿದರು.

ಸಂಜಯನಿಗೆ ಇದು ಇಷ್ಟ ಇರಲಿಲ್ಲ. 'ಆನಂದಣ್ಣ, ಅದು ದೊಡ್ಡ ಟ್ರಾಜೆಡಿ. ಅದರ ಬಗ್ಗೆ ಮಾತಾಡುವುದೆಂದರೆ...' ಎನ್ನುತ್ತಾ ಗಂಟಲು ಸರಿಮಾಡಿಕೊಂಡ.

ಆನಂದಣ್ಣನಿಗೆ ಬೇಸರವಾಯಿತು.. 'ಹೋಗಲಿ ಬಿಡಿ... ನಮಗೆ ಕಾರಂತರ ಮಗನಾಗಿ ನೀವಾದರೂ ಇದ್ದೀರಲ್ಲ' ಅಂದರು. ಒಂದು ಕ್ಷಣ ಇಬ್ಬರಲ್ಲೂ ಮೌನ ಆವರಿಸಿತು. ಆದರೆ ಆನಂದಣ್ಣ ಬೇಗಬೇಗನೇ ಹೆಜ್ಜೆ ಹಾಕುತ್ತಿದ್ದರು.

ಸಂಜಯ್ 'ಆನಂದಣ್ಣ, ನನ್ನ ಅಪ್ಪ ತಮ್ಮ ಮನೆಯ ಬಗ್ಗೆ ಬಹಳ ಹೇಳಿಕೊಳ್ಳುತ್ತಿದ್ದರು. ನಮ್ಮ ಮನೆಯ ಮುಂದಿನ ಭೂತಸ್ಥಾನ, ಕೆರೆ, ತೆಂಗಿನ ಮರ.. ಮನೆಯ ಹಿಂದೆ ಒಂದು ದೊಡ್ಡ ಮಾವಿನಮರ... ಅದರಲ್ಲಿ ಸಾವಿರಾರು ಕಾಟು ಮಾವಿನಹಣ್ಣು ಆಗುವುದು. ಮೊದಲ ಮಳೆ ಬರುವ ಸಮಯ ಜೋರಾಗಿ ಗಾಳಿ ಬೀಸುವಾಗ ಮರದ ಕೆಳಗೆ ಹೋಗಿ ಮಾವಿನಹಣ್ಣು ಹೆಕ್ಕುವುದು. ಇದೆಲ್ಲ ನಾನು ಸಣ್ಣವನಾಗಿರುವಾಗ ಹೇಳುತ್ತಿದ್ರು' ಅಂದ.

ಆನಂದಣ್ಣನಿಗೆ ಇದು ರಾಮಾಯಣದಲ್ಲಿ ಹನುಮಂತ ರಾಮನ ಉಂಗುರ ಸೀತೆಗೆ ತೋರಿಸಿದ ಹಾಗೆ ಕಂಡಿತು. ಈ ಹುಡುಗ ಕಾರಂತರ ಮೊಮ್ಮಗ ಗ್ಯಾರೆಂಟಿ ಅಂದುಕೊಂಡರು.

'ಅಲ್ಲ ಕಾರಂತರೇ, ನಿಮಗೆ ಅಮೆರಿಕದಲ್ಲೇ ಕುಳಿತುಕೊಂಡು ಸೀತಾಪುರ ಕಂಡದ್ದು ಅದ್ಭುತವೇ ಸರಿ. ನಮ್ಮ ಕಾರಂತರು ಬಹಳ ಬುದ್ಧಿವಂತ. ನೀವೂ ಅವರ ಹಾಗೇ ಬಹಳ ಬುದ್ಧಿವಂತರ ಹಾಗೆ ಕಾಣ್ತೀರಿ' ಎನ್ನುತ್ತಾ ಮೆಚ್ಚುಗೆ ವ್ಯಕ್ತಪಡಿಸಿದರು. ಮನಸ್ಸಿನ ಒಳಗೆ 'ಈ ಹುಡುಗನಿಗೆ ಏನು ಉತ್ತರ ಕೊಡಲಿ?' ಎನ್ನುತ್ತಾ ಲೆಕ್ಕ ಹಾಕಿದರು.

ಸ್ವಲ್ಪ ಹೊತ್ತಿನ ಮೇಲೆ 'ನೋಡಿ, ನಿಮ್ಮ ಮನೆಯೂ ಭೂತಸ್ಥಾನವೂ ಅರ್ಧ ಬಿದ್ದುಹೋಗಿದೆ. ಒಂದು ಕಾಲದಲ್ಲಿ ಬಹಳ ವೈಭವದಲ್ಲಿದ್ದ ಮನೆಯದು. ಕಾಲಾಯ ತಸ್ಮೈ ನಮಃ ಅನ್ನುತ್ತಾರಲ್ಲಾ ಹಾಗೆ ಎಲ್ಲಾ ಕಾಲದ ಪ್ರಭಾವ. ರಾಜರ ಮನೆಯ ಹಾಗಿದ್ದ ನಿಮ್ಮ ಮನೆ ಈಗ ಪಾಳುಬಿದ್ದು ಹೋಗಿದೆ. ಇನ್ನು ನಿಮ್ಮ ಕೆರೆಯಲ್ಲಿ ಅರ್ಧ ಮಣ್ಣು ತುಂಬಿಕೊಂಡಿದೆ. ಮನೆ ಹಿಂದಿನ ಮಾವಿನಮರ ಗಾಳಿಗೆ ಬಿದ್ದು ಹೋಗಿದೆ' ಅಂದರು.

ಕಾರಂತರ ಮನೆಯ ಹಿಂದಿನ ಮಾವಿನಮರ ಕಡಿದು ಆನಂದಣ್ಣ ಅವರ ಹೊಸ ಮನೆಗೆ ಮೋಪುಗಳನ್ನು ಮಾಡಿದ್ದರು. ಆದರೆ ಅದನ್ನು ಹೇಗೆ ಸಂಜಯನಿಗೆ ಹೇಳುವುದು?

ಮಾತು ಮುಗಿಯುವಾಗ ಇಬ್ಬರೂ ಕಾರಂತರ ಹಾಳುಬಿದ್ದ ಮನೆಯ ಅಂಗಳಕ್ಕೆ ಬಂದಿದ್ದರು.

(ಸಶೇಷ)




## ಪ್ರತಿಕ್ರಿಯೆ

### ಚಿತ್ರಾಂಗದಾ ಶ್ರೇಷ್ಠ ಖಂಡ ಕಾವ್ಯ

ಕನ್ನಡದಲ್ಲಿ ಕುವೆಂಪು ಅವರ 'ಚಿತ್ರಾಂಗದಾ' ಶ್ರೇಷ್ಠ ಖಂಡ ಕಾವ್ಯ. ಕೃಷ್ಣಪ್ಪ ಅವರು ಈ ವಿಶಿಷ್ಟ ಪ್ರೇಮಕಥೆಯನ್ನು ಸುಂದರವಾಗಿ ಗದ್ಯದಲ್ಲಿ ನಿರೂಪಿಸಿದ್ದಾರೆ. ಮೂಲಕೃತಿಯ ಸೊಗಸು, ಭಾಷಾ ಪ್ರೌಢಿಮೆ, ಮಹೋಪಮೆ ಮುಂತಾದ ಅಂಶಗಳು ವಾಚಕರಿಗೆ ಅನುಭವವಾಗುವಂತೆ ಕೃಷ್ಣಪ್ಪ ಅವರು ಎಚ್ಚರ ವಹಿಸಿರುವುದು ಶ್ಲಾಘನೀಯ. ಇದಕ್ಕಾಗಿ 'ಸುಧಾ'ಕ್ಕೆ ಮೆಚ್ಚುಗೆ ಸಲ್ಲುತ್ತದೆ.

–ಕೆ.ಎಸ್. ಭಗವಾನ್, ಮೈಸೂರು

### ಚಿತ್ರಾಂಗದಾ; ಸರ್ವಾಂಗ ಸುಂದರ!

ಕುವೆಂಪು ವಿರಚಿತ ಧಾರಾವಾಹಿ ಚಿತ್ರಾಂಗದಾ (ಸರಳಗನ್ನಡ ರೂಪ ಜಿ. ಕೃಷ್ಣಪ್ಪ) ಸರ್ವಾಂಗ ಸುಂದರವಾಗಿ ಕಂಗೊಳಿಸಿತು. ಮೂಲಕೃತಿ ಬಹುಶಃ ಇನ್ನಷ್ಟು ಸುಂದರವಿರಬಹುದು. ಕೃಷ್ಣಪ್ಪ ಅವರ ಕನ್ನಡ ಭಾಷೆಯ ಪಲುಕುಗಳು ಘಮಘಮಿಸುವ ಮಲ್ಲಿಗೆ ಸಂಪಿಗೆಯಂತೆಯೇ! ಕಾದಂಬರಿಗೆ ತಕ್ಕಂತೆ ಕಲಾವಿದ ಎಚ್.ಎಸ್. ಮೋನಪ್ಪ ಅವರ ಕುಂಚದಲ್ಲಿ ಮನಮೋಹಕ ಚಿತ್ರಗಳು ಅರಳಿವೆ.

ಕಥೆ ಬರೆದವರಿಗೂ, ಕಲಾವಿದರಿಗೂ, ಪ್ರಕಟಿಸಿದ 'ಸುಧಾ'ಕ್ಕೂ ಕೃತಜ್ಞತೆಗಳು.

–ಕೆ.ಎಂ. ಮಧ್ವರಾಯ, ಬೆಂಗಳೂರು

### ಅದ್ಭುತ ಧಾರಾವಾಹಿ

ಧಾರಾವಾಹಿ ಸರಳಗನ್ನಡದಲ್ಲಿ ಅದ್ಭುತವಾಗಿ ಮೂಡಿಬಂತು. ಮೋನಪ್ಪ ಅವರ ಕಲೆಯಂತೂ ನಿಜ ಚಿತ್ರಾಂಗದೆಯನ್ನು ಸೆರೆಹಿಡಿದು ಪೂರ್ಣ ಕಥೆಯನ್ನೇ ಧ್ವನಿಸುವಂತಿದೆ.

–ಮಂಚಯ್ಯ ಎಂ.ಟಿ.

### ಚಿತ್ರಗಳು ಕಥೆಯಷ್ಟೇ ಆಪ್ಯಾಯಮಾನ!

ಚಿತ್ರಾಂಗದಾ ಧಾರಾವಾಹಿಯಲ್ಲಿ ಮೋನಪ್ಪ ಅವರ ಚಿತ್ರಗಳು ತುಂಬ ಚೆನ್ನಾಗಿ ಬಂದಿವೆ. ಅತ್ಯಂತ ಸಹಜವಾಗಿ ಅರಳಿದ ಚಿತ್ರಗಳು ಕಥೆಯಷ್ಟೇ ಆಪ್ಯಾಯಮಾನವೆನಿಸುತ್ತದೆ.

–ಕಜೆ ಸುಬ್ರಹ್ಮಣ್ಯ ಭಟ್, ವೇಣೂರು

### ಭಾಷಾ ಸೊಬಗು

ಕುವೆಂಪು ಭಾಷಾ ಸೌಂದರ್ಯದ ಸೊಬಗು, ಕೃಷ್ಣಪ್ಪನವರ ಗದ್ಯದಲ್ಲಿ ತುಂಬಿ ಹರಿದಿದೆ, ಇಂತಹ ಧಾರಾವಾಹಿ ಪ್ರಕಟಿಸಿದ್ದಕ್ಕಾಗಿ ಧನ್ಯವಾದಗಳು.

–ಮಹಮ್ಮದ್ ಕಲೀಂ ಉಲ್ಲಾ, ನಾಗಮಂಗಲ

### ಸುಂದರ ದೃಶ್ಯಕಾವ್ಯ

ವಸಂತ ಋತುವಿನ ಸುಂದರ ಕವನ ವಾಚನ ಇಷ್ಟು ಬೇಗ ಮುಗಿಯಿತಾ? ಪ್ರತಿಯೊಂದು ವಾಕ್ಯವು ಸುಂದರ ದೃಶ್ಯ ಕಾವ್ಯ. ಆರನೇ ಕಡೆಯ ಕಂತು ನಮ್ಮ ವರನಟ ರಾಜಕುಮಾರರ 'ಬಭ್ರುವಾಹನ' ಸಿನಿಮಾ ನೆನಪಿಸುವಂತಾಯಿತು. ನಮ್ಮ ರಾಷ್ಟ್ರಕವಿ ಕುವೆಂಪುರವರಿಗೂ, ಸರಳಗನ್ನಡ ರೂಪ ನೀಡಿದ ಕೃಷ್ಣಪ್ಪನವರಿಗೂ, ಸುಂದರ ಕಥನದ ರಸದೌತಣ ನೀಡಿದ ಸುಧಾ ಬಳಗಕ್ಕೂ ಧನ್ಯವಾದ.

–ಕಮಲಾದೇವಿ ರಾಜಶೇಖರ ಹಳೂರ್, ಬೆಂಗಳೂರು

### ಮನಸ್ಸನ್ನು ಆವರಿಸಿತು

ಭಾವ ಸಂಪತ್ತು, ಶಬ್ದ ಸಂಪತ್ತು, ಶೃಂಗಾರ ಲೀಲೆಯ ಲಾಸ್ಯ ಒಳಗೊಂಡಿರುವ ಕಥೆ ಸರಳ ಗದ್ಯದಲ್ಲಿ ಮನಸ್ಸನ್ನು ಆವರಿಸಿತು. ಇದು ಇಷ್ಟು ಬೇಗ ಮುಗಿಯಿತಲ್ಲಾ!

–ವಿಶ್ವೇಶ್ವರ ಗಾಯತ್ರಿ, ಬೆಂಗಳೂರು

### ಕಥೆ-ಚಿತ್ರ ಅದ್ಭುತ

ಕನ್ನಡ ಭಾಷೆಯ ಸೊಗಸು. ಅಲ್ಲಲ್ಲಿ ಬರುವ ಹಳೆಗನ್ನಡ. ಪೂರಕವಾಗಿ ಮೋನಪ್ಪನವರ ಕಲೆ ಎಲ್ಲವೂ ಅದ್ಭುತ. ಚಿತ್ರಾಂಗದಾಳ ವ್ಯಕ್ತಿತ್ವ ಅಬ್ಬಾ ಅನ್ನುವಂತಿತ್ತು. ಆದರೂ ಪುರಾಣದಲ್ಲಿ ಬರುವ ಸ್ತ್ರೀಪಾತ್ರಗಳಿಗೆ ಅನ್ಯಾಯ ಆಗಿದೆಯಾ ಅಂತ ಅನ್ನಿಸುತ್ತೆ.

–ಭಾರತೀ ಗಂಗಾಧರ್, ಬೆಂಗಳೂರು

### ಹೊಸ ಪದಗಳ ಪರಿಚಯ

ಧಾರಾವಾಹಿ ಚೆನ್ನಾಗಿ ಮೂಡಿಬಂದಿದೆ. ಈ ಧಾರಾವಾಹಿಯಲ್ಲಿ ಹೊಸ ಹೊಸ ಶಬ್ದಗಳು ಅಂದರೆ ಕುಕಿಲಿನ, ಕಿರೀಟಿ, ದಿಗ್ಭಿತ್ತಿ, ಸಿತವಾಹನ, ಪಸಾಯಿತೆ, ಶೈವಾಲ, ಕನಕಮಂಡಲ ಇನ್ನೂ ಮುಂತಾದ ಕನ್ನಡ ಪದಗಳ ಪರಿಚಯವಾಯಿತು.

–ಬಿದರಹಳ್ಳಿ ಚನ್ನವೀರಪ್ಪ ಹಿರೇಹಡಗಲಿ

### ಸರಳ ಸುಂದರ ನಿರೂಪಣೆ

ಶತಮಾನಕೆ ಹತ್ತಿರದ ಈ ಖಂಡಕಾವ್ಯದ ಗದ್ಯಾನುವಾದದಲ್ಲಿ ನನಗೆ ಇಲ್ಲಿನ ಉಪಮೆ, ಮಹೋಪಮೆ, ಮಿಶ್ರೋಪಮೆಗಳು, ಮಹಾ ಕಾವ್ಯ ಸೂತ್ರದ ಅಷ್ಟಾದಶ ವರ್ಣನೆಗಳಲ್ಲಿನ ಅನೇಕ ವರ್ಣನೆಗಳು, ಶಬ್ದ ಲಾಲಿತ್ಯದಲ್ಲಿ ಸಂಸ್ಕೃತದ ಯಥೇಚ್ಛ ಪ್ರಯೋಗಗಳ ಸರಳ ನಿರೂಪಣೆ ಇಷ್ಟವಾಯಿತು. ಕಾದಂಬರಿಕಾರರು ಈ ಮರು ನಿರೂಪಣೆಯನ್ನು ಹೊಸ ಮಾದರಿಯ ಸೂಚ್ಯವಾಗಿ ಕಾಣ್ಕೆ ನೀಡಿದ್ದಾರೆ.

–ಡಾ. ರವಿಶಂಕರ್ ಎ.ಕೆ., ಬೆಂಗಳೂರು